Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 18
ದಿನಾಂಕ: 06.11.2025



Rtn. Anil Kumar
President



Rtn. Krishnappa
Secretary

## ವಲಯ 4ರ ಸಾಂಸ್ಕೃತಿಕ ಸಮ್ಮಿಲನ "ಕಲಾಮಂಜೂಷ"ದ ಎಲ್ಲಾ ವಿಭಾಗಗಳಲ್ಲೂ ಬಹುಮಾನಗಳಿಸಿದ ರೋಟರಿ ಐಸಿರಿ




ನವೆಂಬರ್ 2 ರಂದು ಉಡುಪಿಯ ಮಥುರಾ ಕಂಫರ್ಟ್ಸ್ ಸಭಾಂಗಣದಲ್ಲಿ ನಡೆದ ರೋಟರಿ ಜಿಲ್ಲೆ 3182ರ ವಲಯ 4ರ ಸಾಂಸ್ಕೃತಿಕ ಸಮ್ಮಿಲನ "ಕಲಾ ಮಂಜೂಷ" ಕಾರ್ಯಕ್ರಮದಲ್ಲಿ ಪರ್ಕಳದ ರೋಟರಿ ಐಸಿರಿಯು **ಎಲ್ಲಾ ಒಂಭತ್ತು ಸ್ಪರ್ಧಾ ವಿಭಾಗಳಲ್ಲಿಯೂ ಬಹುಮಾನಗಳಿಸಿ** ಮೆಚ್ಚುಗೆ ಪಾತ್ರವಾಯಿತು.

ಜಾನಪದ ಗೀತೆಯಲ್ಲಿ ರೊ. ಡಾ. ಸ್ವಾತಿ ಪೈಯವರಿಗೆ ದ್ವಿತೀಯ ಬಹುಮಾನ, ಚಿತ್ರಗೀತೆ (ಏಕವ್ಯಕ್ತಿ) ಹಾಡುಗಾರಿಕೆಯಲ್ಲಿ ರೊ. ಗುರುಪ್ರಸಾದ್ ಕಾಮತ್ ರಿಗೆ ತೃತೀಯ ಬಹುಮಾನ, ಯುಗಳಗೀತೆ ಹಾಡುಗಾರಿಕೆಯಲ್ಲಿ ರೊ. ಗುರುಪ್ರಸಾದ್ ಕಾಮತ್ ಮತ್ತು ಅನ್ನೆಟ್ ಶ್ರೇಯಾ ಕಾಮತ್ ರಿಗೆ ದ್ವಿತೀಯ ಬಹುಮಾನ, ಏಕಪಾತ್ರಾಭಿನಯದಲ್ಲಿ ರೊ. ಗೀತಾಶ್ರೀ ಎಮ್. ಉಪಾಧ್ಯರಿಗೆ ದ್ವಿತೀಯ ಬಹುಮಾನ, ಏಕವ್ಯಕ್ತಿ ನೃತ್ಯ ಪ್ರದರ್ಶನ (ಅನ್ನೆಟ್ ವಿಭಾಗ)ದಲ್ಲಿ ದ್ವಿತಿ ಶೆಣೈಯವರಿಗೆ ದ್ವಿತೀಯ ಬಹುಮಾನ, ಏಕವ್ಯಕ್ತಿ ನೃತ್ಯ ಪ್ರದರ್ಶನ (ರೊಟೇರಿಯನ್ ವಿಭಾಗ)ದಲ್ಲಿ ರೊ. ಡಾ. ಸ್ವಾತಿ ಪೈಯವರಿಗೆ ದ್ವಿತೀಯ ಬಹುಮಾನ, ಸಮೂಹ ನೃತ್ಯದಲ್ಲಿ ತೃತೀಯ ಬಹುಮಾನ, ಸಮೂಹ ಗಾಯನದಲ್ಲಿ ದ್ವಿತೀಯ ಬಹುಮಾನ, ಕಿರು ಪ್ರಹಸನ (ಸ್ಕಿಟ್) ಪ್ರಥಮ ಬಹುಮಾನ – ಹೀಗೆ ಎಲ್ಲಾ ಒಂಭತ್ತು ವಿಭಾಗಗಳಲ್ಲಿಯೂ ಬಹುಮಾನಗಳಿಸಿ ಸಮಗ್ರ ಪ್ರಶಸ್ತಿ ರನ್ನರ್ ಅಪ್ ಗೆ ಭಾಜನವಾಗಿ ದಾಖಲೆ ಬರೆಯಿತು.

ಸಮೂಹ ಗಾಯನದಲ್ಲಿ ರೊ. ಡಾ. ಸ್ವಾತಿ ಪೈ, ರೊ. ಗುರುಪ್ರಸಾದ್ ಕಾಮತ್, ರೊ. ಗೀತಾಶ್ರೀ ಎಮ್. ಉಪಾಧ್ಯ, ರೊ. ಕೃಷ್ಣಪ್ಪ, ರೊ. ರಾಜೇಶ್ ಡಿ. ಶೆಣೈ, ಆನ್ ರೂಪಶ್ರೀ, ಆನ್ ಜ್ಯೋತ್ಸ್ನಾ ಪಿ. ಲಾಗ್ವಾಂಕರ, ಅನ್ನೆಟ್ ಯಶಾ ಕಾಮತ್, ಅನ್ನೆಟ್ ಶ್ರೇಯಾ ಕಾಮತ್, ಅನ್ನೆಟ್ ವೃದ್ಧಿ ಭಟ್, ಅನ್ನೆಟ್ ದ್ವಿತಿ ಶೆಣೈ ಭಾಗವಹಿಸಿದ್ದರು.

ಕಿರು ಪ್ರಹಸನ (ಸ್ಕಿಟ್)ನಲ್ಲಿ ರೊ. ಸಂದೀಪ್ ಕುಮಾರ್, ಆನ್ ಜ್ಯೋತ್ಸ್ನಾ ಪಿ. ಲಾಗ್ವಾಂಕರ, ರೊ. ಕೃಷ್ಣಪ್ಪ, ರೊ. ಸುನಿಲ್ ಕುಮಾರ್, ರೊ. ಗುರುಪ್ರಸಾದ್ ಕಾಮತ್, ರೊ. ಅನಿಲ್ ಕುಮಾರ್, ರೊ. ರಾಜೇಶ್ ಡಿ. ಶೆಣೈ, ರೊ. ಮಂಜುನಾಥ ಉಪಾಧ್ಯ ಎಮ್., ರೊ. ಕೊರಗಪ್ಪ ಶೆಟ್ಟಿಗಾರ್, ರೊ. ಅಶೋಕ್ ನಾಯಕ್, ಜೊನ್ ಶ್ಲೋಕ್ ನಾಯಕ್, ಅನ್ನೆಟ್ ಯಶಾ ಕಾಮತ್ ಪಾತ್ರವಹಿಸಿದ್ದರು.

ಸಮೂಹ ನೃತ್ಯದಲ್ಲಿ ರೊ. ಡಾ. ಸ್ವಾತಿ ಪೈ, ಆನ್ ರೂಪಶ್ರೀ, ರೊ. ಅನಿಲ್ ಕುಮಾರ್, ರೊ. ಸಂದೀಪ್ ಕುಮಾರ್, ಅನ್ನೆಟ್ ಯಶಾ ಕಾಮತ್, ಅನ್ನೆಟ್ ಶ್ರೇಯಾ ಕಾಮತ್, ಅನ್ನೆಟ್ ವೃದ್ಧಿ ಭಟ್, ಅನ್ನೆಟ್ ದ್ವಿತಿ ಶೆಣೈ, ಅನ್ನೆಟ್ ದಿಯಾ, ಅನ್ನೆಟ್ ವೇದ ಭಟ್, ಜೋನ್ ಚಿರಾಗ್, ಜೊನ್ ಪವಿತ್ ಭಾಗವಹಿಸಿದ್ದರು.

ಸಾಂಸ್ಕೃತಿಕ ಸ್ಪರ್ಧೆಗಳಿಗೆ ರೊ. ಡಾ. ಸ್ವಾತಿ ಪೈ ಮತ್ತು ಸ್ಕಿಟ್ ಗೆ ರೊ. ಕೃಷ್ಣಪ್ಪ ತರಬೇತಿ ನೀಡಿ ಸಜ್ಜುಗೊಳಿಸಿದ್ದರು.

*(... ಪುಟ 2ಕ್ಕೆ)*




ಪ್ರಥಮ ಬಹುಮಾನಗಳಿಸಿದ ಸ್ಕಿಟ್ ಮೂಲಕಥೆ ಮತ್ತು ನಿರ್ದೇಶನ ನಮ್ಮ ಕಾರ್ಯದರ್ಶಿ ರೊ. ಕೃಷ್ಣಪ್ಪ  ಅವರದಾಗಿದ್ದು, ವಿಸ್ತೃತ ಸಂಭಾಷಣೆ ರೂಪಿಸುವಲ್ಲಿ ರೊ. ಸ್ಮಿತಾ ಕಾಮತ್ ಮಾರ್ಗದರ್ಶನ ನೀಡಿರುತ್ತಾರೆ. ರೊ. ಕೃಷ್ಣಪ್ಪ ಅವರು ತಮ್ಮ ಪ್ರಥಮ ಪ್ರಯತ್ನದಲ್ಲೇ ಈ ಮಟ್ಟದ ಯಶಸ್ಸಿಗೆ ಪಾತ್ರರಾಗುವ ಮೂಲಕ ಹೆಮ್ಮೆಯ ಸಾಧನೆ ಮಾಡಿರುತ್ತಾರೆ.

ಸಾಂಸ್ಕೃತಿಕ ಚಟುವಟಿಕೆಗಳ ಚೌಕಟ್ಟನ್ನು ರೂಪಿಸಿ, ಸಮೂಹ ಗಾಯನ ಮತ್ತು ಸಮೂಹನೃತ್ಯ ಸ್ಪರ್ಧೆಗಳಿಗೆ ತಂಡಗಳನ್ನು ಸಜ್ಜುಗೊಳಿಸಿ, ಸತತ ತರಬೇತಿಯನ್ನು ನೀಡಿದ್ದು ಮಾತ್ರವಲ್ಲದೆ, ತಾನೂ ಸಹ ಎರಡು ವೈಯುಕ್ತಿಕ ವಿಭಾಗಗಳಲ್ಲಿ ಸ್ಪರ್ಧಿಸಿ ದ್ವಿತೀಯ ಬಹುಮಾನಗಳನ್ನು ಗಳಿಸಿದ ರೊ. ಡಾ. ಸ್ವಾತಿ ಪೈ ಗಮನಾರ್ಹ ಕೊಡುಗೆ ನೀಡಿರುತ್ತಾರೆ.

ಪ್ರಶಸ್ತಿಗಳನ್ನು PDG ಡಾ. ಜಯ ಗೌರಿ, ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್, ವಲಯ ಸೇನಾನಿ ರೊ. ಸ್ಮಿತಾ ಕಾಮತ್, ಸಾಂಸ್ಕೃತಿಕ ವಿಭಾಗದ ಜಿಲ್ಲಾ ಸಭಾಪತಿ ರೊ. ವಿನಯ್, ಉಪ ಸಭಾಪತಿ ರೊ. ಸುರೇಂದ್ರ ನಾಯಕ್ ವಿತರಿಸಿದರು.

ಈ ಸಾಧನೆಗೆ ರೋಟರಿ ಜಿಲ್ಲೆಯ ಮತ್ತು ವಿಶೇಷವಾಗಿ ವಲಯ 4 ರೋಟರಿ ಐಸಿರಿಯ ಅಭಿಮಾನಿಗಳು ರೊ. ಗುರುಪ್ರಸಾದ್ ಕಾಮತ್ ಮತ್ತು ರೊ. ಸ್ಮಿತಾ ಕಾಮತ್ ರೊಂದಿಗೆ ಮಾತನಾಡಿ ಸಂತಸ ವ್ಯಕ್ತಪಡಿಸಿದ್ದಾರೆ.

ನಮ್ಮ ಸಾಧನೆಯನ್ನು ಗುರುತಿಸಿ, ಅಭಿನಂದಿಸಿ ಪ್ರೋತ್ಸಾಹಿಸಿದ ಸರ್ವರಿಗೂ ಮತ್ತು ಈ ಎಲ್ಲ ಶ್ರೇಯಕ್ಕೆ ಕಾರಣೀಕರ್ತರಾದ ನಮ್ಮ ಸದಸ್ಯರು ಮತ್ತು ಅವರ ಕುಟುಂಬವರ್ಗಕ್ಕೆ  ರೋಟರಿ ಅಧ್ಯಕ್ಷ ರೊ ಅನಿಲ್ ಕುಮಾರ್ ಧನ್ಯವಾದಗಳನ್ನು ಸಮರ್ಪಿಸಿರುತ್ತಾರೆ.

ರೋಟರಿ ಐಸಿರಿಯ ಸಮುದಾಯಸೇವಾ ನಿರ್ದೇಶಕರಾದ ರೊ. ಕೆ. ಪ್ರಕಾಶ್ ಶೆಣೈಯವರು ಬಹುಮಾನಗಳಿಸಿದ ಎಲ್ಲರನ್ನೂ ಅಭಿನಂದಿಸಿ, ಬಹಳ ಅಭಿಮಾನದಿಂದ ವಿಶೇಷ ಮುತುವರ್ಜಿ ವಹಿಸಿ, ರೋಟರಿ ಐಸಿರಿ ಕುಟುಂಬದವರಿಗಾಗಿ ಇಂದು ಅತ್ರಾಡಿಯ ಭವ್ಯ ಶಾಂಭವೀ ಹೋಟೆಲ್ ಸಭಾಂಗಣದಲ್ಲಿ ಹೊರಾಂಗಣ ಸಭೆಯನ್ನು ಏರ್ಪಡಿಸಿರುತ್ತಾರೆ.




ಯುಗಳಗೀತೆಯಲ್ಲಿ ಅನ್ನೆಟ್ ಶ್ರೇಯಾ ಕಾಮತ್, ಏಕಪಾತ್ರಾಭಿನಯದಲ್ಲಿ ರೊ. ಗೀತಾಶ್ರೀ ಎಮ್. ಉಪಾಧ್ಯ,
ನೃತ್ಯ ಮತ್ತು ಗಾಯನದಲ್ಲಿ ರೊ. ಡಾ. ಸ್ವಾತಿ ಪೈ, ನೃತ್ಯದಲ್ಲಿ ಅನ್ನೆಟ್ ದ್ವಿತಿ ಶೆಣೈ, ಚಿತ್ರಗೀತೆಯಲ್ಲಿ ರೊ. ಗುರುಪ್ರಸಾದ್ ಕಾಮತ್.

## ಬೌದ್ಧಿಕ ಸಿರಿ **ಮಾವಿನ ಮರ ಮತ್ತು ಚಪ್ಪಡಿಕಲ್ಲಿನ ಸಂಭಾಷಣೆ**

ಆ ಊರಿನ ದೇವಾಲಯದ ಹೊರಾಂಗಣದಲ್ಲಿ ಒಂದು ಫಲಭರಿತ ಮಾವಿನ ಮರವಿತ್ತು. ಮತ್ತು ಸನಿಹದಲ್ಲೇ ಚಪ್ಪಡಿ ಕಲ್ಲಿಗಳಿದ್ದವು. ಅವುಗಳ ನಡುವಿನ ಒಂದು ಸಂಭಾಷಣೆ ಹೀಗಿತ್ತು:

<u>ಮಾವಿನಮರ:</u> "ಅಯ್ಯೋ ಇವರೆಲ್ಲ ನನಗೆ ಏಕೆ ಕಲ್ಲುಗಳನ್ನು ತೂರುತ್ತಿದ್ದಾರೆ. ಇವರಿಗೆ ನಾನೇನು ಕಮ್ಮಿಮಾಡಿದ್ದೇನೆ. ನನಗೆಷ್ಟು ನೋವಾಗುತ್ತದೆ ಎನ್ನುವ ಬಗ್ಗೆ ಏಕೆ ಇವರು ಯೋಚಿಸುವುದಿಲ್ಲ".

<u>ಚಪ್ಪಡಿಕಲ್ಲು:</u> "ಹೌದು, ನೀನು ಇಲ್ಲಿಗೆ ಬರುವವರಿಗೆ ನೆರಳನ್ನು ನೀಡುತ್ತಿರುವೆ. ಪಶುಪಕ್ಷಿಗಳಿಗೂ ಆಶ್ರಯ ನೀಡುತ್ತಿರುವೆ. ಅಷ್ಟೊಂದು ಸುಗಂಧ ಭರಿತ, ರಸವತ್ತಾದ, ಸುಂದರವರ್ಣದ ಮಾವಿನ ಹಣ್ಣುಗಳಿಂದ ತುಂಬಿ ತುಳುಕುತ್ತಿದ್ದೀಯ. ಆ ಹಣ್ಣುಗಳು ಎಲ್ಲರನ್ನೂ ಬಹುವಾಗಿ ಆಕರ್ಷಿಸುತ್ತಿದೆ. ಅದರಿಂದಾಗಿ ಅವರು ನಿನ್ನತ್ತ ಕಲ್ಲು ಹೊಡೆದು ನಿನ್ನ ಆ ಫಲವನ್ನು ತಮ್ಮದಾಗಿಸಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ"

ಹೀಗೆ ಮುಂದುವರೆಯುತ್ತ ತನ್ನ ನೋವಿನ ಕಥೆಯನ್ನೂ ವ್ಯಥೆಯನ್ನೂ ಹೇಳತೊಡಗಿತು.

"ನೀನು ಪೆಟ್ಟನ್ನು ಸಹಿಸಿಕೋ ಮತ್ತು ಜನರಿಗೆ ಉತ್ತಮ ಫಲ ನೀಡುವ ನಿನ್ನ ಕೆಲಸವನ್ನು ಮುಂದುವರಿಸು. ಶಿಲ್ಪಿಯೊಬ್ಬ ಪ್ರತೀ ದಿನ ಹರಿತವಾದ ಉಪಕರಣಗಳಿಂದ ನನ್ನನ್ನು ಕುಟ್ಟುತ್ತಲಿದ್ದ. ನನಗೂ ಬಹಳ ನೋವಾಗುತ್ತಿತ್ತು. ಆ ಉಳಿಯ ಪೆಟ್ಟನ್ನು ತಾಳಲಾರದ ನಾನು ಪ್ರತಿಭಟಿಸಿ, ಶಿಲ್ಪಿಗೆ ಸಹಕರಿಸಲಿಲ್ಲ. ಆ ಪೆಟ್ಟುಗಳಿಂದ ಕಳಚಿಕೊಂಡು ಖುಷಿಪಟ್ಟೆ..... ಆದರೆ, ಇಂದು ನೋಡು, ನನ್ನನ್ನು ಚಪ್ಪಡಿಕಲ್ಲಾಗಿ ಉಪಯೋಗಿಸುತ್ತಿದ್ದಾರೆ. ಎಲ್ಲರೂ ನನ್ನನ್ನು ಮೆಟ್ಟಿ ಹೋಗುತ್ತಾರೆ. ನನ್ನದೇ ಇನ್ನೊಂದು ಭಾಗವಾಗಿದ್ದ ಆ ಶಿಲೆಯು ಉಳಿಯ ಪೆಟ್ಟುಗಳನ್ನೆಲ್ಲಾ ಸಹಿಸಿಕೊಂಡು, ನೋವನ್ನು ನುಂಗಿಕೊಂಡಿತ್ತು. ದಿನ ಹೋದಂತೆ ಅದು ಸುಂದರವಾದ ಮೂರ್ತಿಯಾಯಿತು. ಅವರು ಅದನ್ನು ಗರ್ಭಗುಡಿಯಲ್ಲಿಟ್ಟು ನಿತ್ಯ ವಿಧವಿಧದ ಅಲಂಕಾರ ಮಾಡಿ, ಪೂಜೆ ಮಾಡಿ ಆರಾಧಿಸುತ್ತಿದ್ದಾರೆ, ಕೈಮುಗಿಯುತ್ತಿದ್ದಾರೆ. ನನಗೀಗ ಬುದ್ಧಿ ಬಂತು, ಆದರೆ ಈಗ ನಾನು ಏನೂ ಮಾಡಲು ಸಾಧ್ಯವಿಲ್ಲ." ಎಂದು ಬಹಳ ವ್ಯಥೆಪಟ್ಟಿತು.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಕಲಾಮಂಜೂಷದಲ್ಲಿ ಐಸಿರಿ














## ಕಾರ್ಯದರ್ಶಿಯವರ ವರದಿ



ನವೆಂಬರ್ 2ರಂದು ಉಡುಪಿಯ ಮಥುರಾ ಕಂಫರ್ಟ್ಸ್ ಸಭಾಂಗಣದಲ್ಲಿ ನಡೆದ ರೋಟರಿ ಜಿಲ್ಲೆ 3182 ರ ವಲಯ 4ರ ಸಾಂಸ್ಕೃತಿಕ ಸಮ್ಮಿಲನ ಕಾರ್ಯಕ್ರಮದಲ್ಲಿ ಪರ್ಕಳದ ರೋಟರಿ ಐಸಿರಿಯು ಹಲವಾರು ಪ್ರಶಸ್ತಿಗಳನ್ನು ಗಳಿಸಿ ಮೆಚ್ಚುಗೆಗೆ ಪಾತ್ರವಾಯಿತು.

ಕಿರು ಪ್ರಹಸನದಲ್ಲಿ ಪ್ರಥಮ ಬಹುಮಾನ, ಏಕವ್ಯಕ್ತಿ (ಜಾನಪದ) ಹಾಡುಗಾರಿಕೆ ಡಾ. ಸ್ವಾತಿ ಪೈ ದ್ವಿತೀಯ, ಯುಗಳಗೀತೆಯಲ್ಲಿ ಗುರುಪ್ರಸಾದ್ ಕಾಮತ್ ಮತ್ತು ಶ್ರೇಯಾ ಜಿ. ಕಾಮತ್ ದ್ವಿತೀಯ, ಸಮೂಹ ಗಾಯನದಲ್ಲಿ ದ್ವಿತೀಯ, ಅನ್ನೆಟ್ ಏಕವ್ಯಕ್ತಿ ನೃತ್ಯದಲ್ಲಿ ದ್ವಿತಿ ಶೆಣೈ ದ್ವಿತೀಯ, ರೋಟರಿಯನ್ ಏಕವ್ಯಕ್ತಿ ನೃತ್ಯದಲ್ಲಿ ಸ್ವಾತಿ ಪೈ ದ್ವಿತೀಯ, ಏಕಪಾತ್ರಾಭಿನಯದಲ್ಲಿ ಗೀತಾಶ್ರೀ ಎಂ. ಉಪಾಧ್ಯ ದ್ವಿತೀಯ ಸ್ಥಾನಿಗಳಾಗಿ, ಫಿಲಂ ಸಾಂಗ್ ಸೋಲೊ ಗುರುಪ್ರಸಾದ್ ಕಾಮತ ತೃತೀಯ, ಗ್ರೂಪ್ ಡ್ಯಾನ್ಸ್ ತೃತೀಯ ಹಾಗೂ ಸಮಗ್ರ ಪ್ರಶಸ್ತಿ ರನ್ನರ್ ಆಫ್ ಪ್ರಶಸ್ತಿಗೆ ಭಾಜನವಾಯಿತು.

ಎಲ್ಲಾ ಇವೆಂಟ್ಗಳಲ್ಲಿ ಭಾಗವಹಿಸಿ ಎಲ್ಲಾ ಇವೆಂಟ್ಗಳಲ್ಲಿ ಬಹುಮಾನ ಪಡೆದ ನಮ್ಮ ಐಸಿರಿಯು ಇತಿಹಾಸ ಸೃಷ್ಟಿಸಿತು. ಪ್ರಶಸ್ತಿಗಳನ್ನು PDG ಡಾ. ಜಯ ಗೌರಿ , ಸಹಾಯಕ ಗವರ್ನರ್ ಅಮಿತ್ ಅರವಿಂದ್, ವಲಯ ಸೇನಾನಿ ಸ್ಮಿತಾ ಕಾಮತ್, ಸಾಂಸ್ಕೃತಿಕ ವಿಭಾಗದ ಜಿಲ್ಲಾ ಸಭಾಪತಿ ರೊ ವಿನಯ್, ಉಪ ಸಭಾಪತಿ ರೊ ಸುರೇಂದ್ರ ನಾಯಕ್ ಮತ್ತು PDG ರೊ ಜಯಗೌರಿ ವಿತರಿಸಿದರು.

## "ಐಶ್ವರ್ಯ" 17 ನೇ ಸಂಚಿಕೆ ಬಿಡುಗಡೆ



28/10/2025 ರಂದು ಬಿಡುಗಡೆಗೊಂಡ, ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹದಿನೇಳನೇ** ಆವೃತ್ತಿ. ಚಿತ್ರದಲ್ಲಿ ಸ್ಥಾಪಕಾಧ್ಯಕ್ಷರಾದ ರೊ. ಕೆ. ಪ್ರಭಾಕರ ಶೆಟ್ಟಿಯವರು.

**ರೋಟರಿ ಐಸಿರಿಯ ಇಂಟರಾಕ್ಟ್ ಘಟಕ ವಿರುವ ಅಲೆವೂರಿನ ಶಾಂತಿ ನಿಕೇತನ ಶಾಲೆಯ ವಿದ್ಯಾರ್ಥಿಗಳು**
**ಕರ್ನಾಟಕ ರಾಜ್ಯೋತ್ಸದ ನೃತ್ಯ ಪ್ರದರ್ಶನಕ್ಕೆ ಸಮಾಧಾನಕರ ಬಹುಮಾನ ಗಳಿಸಿದರು.**
**ಈ ಸಂಧರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಜಿಲ್ಲಾಧಿಕಾರಿ ಶ್ರೀಮತಿ ಸ್ವರೂಪ ಟಿ. ಕೆ. ಉಪಸ್ಥಿತರಿದ್ದರು.**

